ದಿನಾಂಕ 1-6-97 ರಿಂದ ನಿರ್ದಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿ ಅನುಷ್ಠಾನಕ್ಕೆ ಬರುವುದಕ್ಕಿಂತ ಮುಂಚೆ ರಾಜ್ಯವು 1,52,260 ಮೆ.ಟನ್ ಆಹಾರಧಾನ್ಯವನ್ನು ಪಡೆಯುತ್ತಿತ್ತು. ಎತ್ತುವಳಿ ಪ್ರಮಾಣವು ಮಾಹೆಯಾನ ಶೇ.79 ರಷ್ಟಿತ್ತು. ಉಳಿದ ಶೇ.21 ರಷ್ಟು ಆಹಾರ ಧಾನ್ಯಗಳಲ್ಲಿ ಆಸ್ಪತ್ರೆಗಳಿಗೆ ಹಾಗೂ ಇತರ ಸಂಸ್ಥೆಗಳಿಗೆ, ಜೈಲುಗಳಿಗೆ, ಆಶ್ರಮಗಳಿಗೆ ಅನಾಥ ಆಶ್ರಮಗಳಿಗೆ ಹಾಗೂ ಇತರೆ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುತ್ತಿತ್ತು. ನಿರ್ದಿಷ್ಟ ಗುರಿಯುಳ್ಳ ಸಾ.ವಿ.ಪ. ಅನುಷ್ಠಾನಕ್ಕೆ ಬಂದಂದಿನಿಂದ ರಾಜ್ಯದ ಹಂಚಿಕೆಯನ್ನು ಮಾಹೆಯಾನ 75,000 ಮೆ.ಟನ್ ಆಹಾರ ಧಾನ್ಯಗಳನ್ನು ಕಡಿತ ಮಾಡಲಾಯಿತು.

ಇದರಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ಪಡಿತರ ಚೀಟಿದಾರರಿಗೆ ಹಂಚಿಕೆ ಮಾಡಲು ಕಷ್ಟವಾಗಿರುತ್ತದೆ. ಆದ್ದರಿಂದ ಆಶ್ರಮ, ಅನಾಥ ಆಶ್ರಮ, ಜೈಲು ಆಸ್ಪತ್ರೆಗಳಿಗೆ ಹಂಚಿಕೆಯನ್ನು ದಿನಾಂಕ 1-6-97 ರಿಂದ ನಿಲ್ಲಿಸಲಾಗಿದೆ. ಆದರೂ ಕೂಡ ವಿಶೇಷ ಪ್ರಕರಣಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುವುದು. ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ವಿತರಣೆ ಮಾಡಲಾಗುತ್ತಿದೆ.

ಆ) ಪ್ರತಿ ಕುಟುಂಬಗಳಿಗೆ 10 ಕೆ.ಜಿ. ಯಂತೆ ಮತ್ತು ಆಶ್ರಮ ಜೈಲು ಹಾಗೂ ಇನ್ನಿತರ ಸಂಸ್ಥೆಗಳಿಗೆ ಆಹಾರಧಾನ್ಯಗಳನ್ನು ಹಂಚಿಕೆ ಮಾಡಲು ಸಾಧ್ಯವಾಗುವಂತೆ ರಾಜ್ಯದ ಮಾಹೆ ಯಾನ ಹಂಚಿಕೆಯನ್ನು 75,000 ಮೆ. ಟನ್‌ನಿಂದ 1,20,000 ಮೆ. ಟನ್‌ಗೆ ಹೆಚ್ಚಿಸಬೇಕೆಂದು ಭಾರತ ಸರ್ಕಾರಕ್ಕೆ ಮನವಿ ಮಾಡಿದ್ದು, ಭಾರತ ಸರ್ಕಾರವು ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿದ್ದನ್ನು ಸ್ವೀಕರಿಸಿದ ನಂತರ ಸರಬರಾಜು ಮಾಡಲಾಗುವುದು.

ನಾಗರೀಕ ರಕ್ಷಣೆ ಹೊಂಗಾಡ್ಸ್‌ಗೆ ತರಬೇತಿ ಕಾರ್ಯಕ್ರಮ

1763 - ಶ್ರೀ ಎಸ್. ಯೋಗಿಶ್ ಭಟ್ (ಮಂಗಳೂರು) : ಮಾನ್ಯ ಬಂದಿಖಾನೆ ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಿಕ ರಕ್ಷಣೆ ಹೋಂಗಾಡ್ಸ್‌ಗೆ ಸೇರಿದ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ತರಬೇತಿ ಕೊಡಲು ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದೆ?

ಶ್ರೀ ವಿ. ಸೋಮಣ್ಣ (ಬಂಧೀಖಾನೆ, ಗೃಹರಕ್ಷಕ ದಳ, ಸೈನಿಕ ಕಲ್ಯಾಣ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :

ಅ) ಸಾರ್ವಜನಿಕರು ನಾಗರಿಕ ರಕ್ಷಣೆ ಮತ್ತು ಗೃಹರಕ್ಷಕ ದಳದ ಸಂಸ್ಥೆಗಳಿಗೆ ಸ್ವಯಂಸೇವಾ ಸದಸ್ಯರಾಗಿ ಭರ್ತಿಗೊಂಡ ಸಮಾಜಕ್ಕೆ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆಗಳಲ್ಲಿ ಸ್ವಯಂ ಸೇವಾ ಸದಸ್ಯರೊಂದಿಗೆ ಇಲಾಖಾ ಅಧಿಕಾರಿಗಳೂ ಸಹ ಸೇವೆ ಸಲ್ಲಿಸುತ್ತಿದ್ದಾರೆ. ಗೃಹ ರಕ್ಷಕ ದಳದ ಸದಸ್ಯರು ಮತ್ತು ಸರ್ಕಾರಿ ನೌಕರರಿಗೆ ಈ ಕೆಳಕಂಡ ತರಬೇತಿಗಳನ್ನು ನೀಡಲಾಗುತ್ತಿದೆ.

1)	ಪ್ರಥಮ ಚಿಕಿತ್ಸೆ	14	ದಿನಗಳು
2)	ಮುಂದಾಳತ್ವ ತರಬೇತಿ	21	”
3)	ಪ್ರಗತಿಪರ ರಕ್ಷಣಾ ವಿಧಾನ ತರಬೇತಿ	14	”
4)	ಅಂಶಕಾಲಿಕ ಬೋದಕರ ತರಬೇತಿ	18	”
5)	ಸಂಚಾರ ಮತ್ತು ಕಾನೂನು ಪಾಲನೆ ತರಬೇತಿ	10	”
6)	ಮೂಲ ಪ್ರವಾಹ ರಕ್ಷಣಾ ತರಬೇತಿ	10	”
7)	ಪ್ರಗತಿಪರ ಅಗ್ನಿಶಾಮನ ತರಬೇತಿ	14	”
8)	ನಿಸ್ಥಂತು ನಿರ್ವಹಣೆ ತರಬೇತಿ	10	”
9)	ಪುನರ್ ವ್ಯಾಸಂಗಿಕ ತರಬೇತಿ	14	”

ಪೌರ ರಕ್ಷಣಾ ಸ್ವಯಂಸೇವಕ ಸದಸ್ಯರ ಹಾಗೂ ದಳದ ಸರ್ಕಾರಿ ಅಧಿಕಾರಿಗಳಿಗೆ ಪ್ರತ್ಯೇಕವಾದ ತರಬೇತಿಗಳನ್ನು ನೀಡಲಾಗುತ್ತಿದೆ.

ಅವು ಯಾವುವು ಎಂದರೆ :

1)	ಮೂಲ ನಾಗರೀಕ ರಕ್ಷಣಾ ತರಬೇತಿ	5	ದಿನಗಳು
2)	ಪ್ರಗತಿಪರ ಪ್ರಥಮ ಚಿಕಿತ್ಸೆ ತರಬೇತಿ	10	“
3)	ನಾಗರಿಕ ರಕ್ಷಣಾ ವಾರ್ಡನ್ ತರಬೇತಿ	10	”
4)	ಮೂಲ ಅಗ್ನಿಶಮನ ತರಬೇತಿ	10	”
5)	ವಿವಿಧ ಬಾಂಬುಗಳ ಕುರಿತು ತರಬೇತಿ	5	”
6)	ನಾಗರಿಕ ರಕ್ಷಣಾ ಸಂಪರ್ಕ ತರಬೇತಿ	10	”

ದ.ಕನ್ನಡ ಜಿಲ್ಲೆಯ ಕರಾವಳಿ ತೀರದಲ್ಲಿ ಬಾರ್ಜ್ ಮೌಂಟ್ ವಿದ್ಯುತ್ ಘಟಕ

1765 - ಶ್ರೀ ಎಸ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ತೀರದಲ್ಲಿ ಎಷ್ಟು ಬಾರ್ಜ್ ಮೌಂಟ್ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಯೋಜಿಸಿದೆ?

ಆ) ಯಾವ ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಜಾಗವನ್ನು ಕಾದಿರಿಸಲಾಗಿದೆ?

ಇ) ಈ ಬಗ್ಗೆ ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಬಂಡವಾಳ ಹೂಡಿಕೆಯ ಆಧಾರದಲ್ಲಿ ಒಪ್ಪಂದವನ್ನು ಮಾಡಲಾಗಿದೆ?